ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೊಂಡ ಯೋಜನೆಗಳು.

೨೧೨೧(೨೭೦೧)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೊಳ್ಳಲು ನಿರ್ಧರಿಸಿರುವ ಯೋಜನೆಗಳಾವುವು?

ಆ. ೧೯೯೯-೨೦೦೦ನೇ ಸಾಲಿನಲ್ಲಿ ಅದಕ್ಕೆ ಒದಗಿಸಲಾಗಿರುವ ಮೊತ್ತ ಎಷ್ಟು: ಹಾಗೂ ಖರ್ಚಾಗಿರುವ ಹಣವೆಷ್ಟು : (ಕ್ಷೇತ್ರವಾರು ಯೋಜನಾವಾರು ವಿವರ ನೀಡುವುದು)

ಇ. ರಾಜ್ಯ ಸರ್ಕಾರವು ನಬಾರ್ಡ್‌ಗೆ ಪಾವತಿ ಮಾಡಬೇಕಾಗಿರುವ ಸಾಲ ಎಷ್ಟು: ವರ್ಷಕ್ಕೆ ಸದರಿ ಹಣಕ್ಕೆ ಎಷ್ಟು ಬಡ್ಡಿ ನೀಡಲಾಗುತ್ತಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ನಬಾರ್ಡ್ ಸಹಾಯದಿಂದ ಈವರೆಗೆ ೮೯೬ ರಸ್ತೆ ಅಭಿವೃದ್ಧಿ ಮತ್ತು ೨೪೮ ಸೇತುವೆ ನಿರ್ಮಾಣದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಆ. ೧೯೯೯-೨೦೦೦ನೇ ಸಾಲಿನಲ್ಲಿ ೧೨೦ ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಿದ್ದು ಒಟ್ಟು ಖರ್ಚಾಗಿರುವ ಮೊತ್ತ ೧೧೧.೨೭ ಕೋಟಿ ರೂ.ಗಳು (ವಿವರ ಅನುಬಂಧದಲ್ಲಿ ನೀಡಿದೆ)

ಇ. ಈವರೆಗೆ ೨೧೨.೬೫ ಕೋಟಿ ರೂ.ಗಳ ಸಾಲ ಪಡೆದಿದ್ದು, ಈ ಮೊತ್ತವನ್ನು ಮಾರ್ಚ್ ೨೦೦೧ರಿಂದ ಪಾವತಿಸಬೇಕಿರುತ್ತದೆ. ಈ ಮೊತ್ತಕ್ಕೆ ಶೇಕಡ ೧೨ರಷ್ಟು ಬಡ್ಡಿ ನೀಡಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿರುವ ಉಗಾರ ಸಕ್ಕರೆ ಕಾರ್ಖಾನೆಯಿಂದ ಪರಿಸರ ಮಾಲಿನ್ಯ.

೨೧೨೨(೨೭೦೨)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಅರಣ್ಯ ಪರಿಸರ ಮತ್ತು